ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 9ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

**ಖಂಡ 1 ಇತ್ಯಾದಿ**

**ಅಧ್ಯಕ್ಷರು:** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

**ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):** ಮಾನ್ಯ ಅಧ್ಯಕ್ಷರೆ, "ಸನ್ಮಾನ್ಯ ರಾಜ್ಯಪಾಲರಿಂದ ಉಲ್ಲೇಖಿಸಲಾಗಿರುವಂತೆ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು:** ಪ್ರಸ್ತಾವ ಏನೆಂದರೆ,

"ಸನ್ಮಾನ್ಯ ರಾಜ್ಯಪಾಲರಿಂದ ಉಲ್ಲೇಖಿಸಲಾಗಿರುವಂತೆ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(iii) ಕರ್ನಾಟಕ ಪಟ್ಟಣ ಹಾಗೂ ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2004**

ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):** ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

**ಅಧ್ಯಕ್ಷರು:** ಇದರ ಏಮ್ಸ್ ಅಂಡ್ ಅಬ್ಜೆಕ್ಟ್ಸ್‌ಗಳೇನೆಂಬುದನ್ನು ಹೇಳಿ.

**ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):** ಮಾನ್ಯ ಅಧ್ಯಕ್ಷರೆ, ಇದೂ ಕೂಡ ಹಿಂದೆ ವಿವರಿಸಿದಂಥ ವಿಧೇಯಕವೇ. ಹಿಂದೆ ಮಾಡಿದಂಥ ಬಿಲ್‌ಅನ್ನು ಖಂಡ ಖಂಡವಾಗಿ ಮಾಡಿದ್ದು, ಇದೂ ಕೂಡ ರಾಜ್ಯಪಾಲರಿಗೆ ಹೋಗಿತ್ತು. ಅನ್‌ಅಥರೈಸ್ಡ್ ಕನ್‌ಸ್ಟ್ರಕ್ಷನ್‌ಗಳನ್ನು ರೆಗ್ಯುಲರೈಸ್ ಮಾಡಲು ಇದನ್ನು ಮಾಡಿರುವಂಥಾದ್ದು. ಇದಕ್ಕೆ ಶೇಕಡಾ 100ರವರೆಗೆ ಅನುಮತಿ ಕೊಟ್ಟಿದ್ದು, ರಾಜ್ಯಪಾಲರು, ಇದು ಸರಿಯಲ್ಲ, ಇದಕ್ಕೆ ಸರಿಯಾದಂಥ ಮತ್ತು ನಿಗದಿತವಾದಂಥ ಒಂದು ಚೇಟ್

ಮತ್ತೊಂದು ಸ್ಪೆಸಿಫಿಕ್ಕಾಗಿ ಇರಬೇಕು ಎಂದು ಅನೇಕ ಸಲಹೆಗಳನ್ನು ಕೊಟ್ಟಿದ್ದರು. ಈಗ ನಾವು ಅನ್‌ಅಥರೈಸ್ಡಾಗಿ ಕಟ್ಟಿರತಕ್ಕಂಥಾದ್ದರಲ್ಲಿ ಶೇಕಡಾ 50ರಷ್ಟನ್ನು ಮಾತ್ರ ರೆಗ್ಯುಲರೈಸ್ ಮಾಡುತ್ತಿದ್ದೇವೆ. ಅದರಲ್ಲಿ ಶೇಕಡಾ 25ರವರೆಗೆ ಒಂದು ಸ್ಲ್ಯಾಬ್, ನಂತರದ 25 ರವರೆಗೆ ಇನ್ನೊಂದು ಸ್ಲ್ಯಾಬ್ ಇದೆ. ರೆಸಿಡೆನ್ಷಿಯಲ್ ಪರ್ಪಸ್‌ಗೆಂದು ಅನ್‌ಅಥರೈಸ್ಡ್ ಆಗಿ ಕಟ್ಟಿರುವವರಿಗೆ, ಸಬ್ ರಿಜಿಸ್ಟ್ರಾರ್‌ರವರ ರೇಟಿನ ಅಂದರೆ ಬೇಸಿಕ್ ವ್ಯಾಲ್ಯೂವಿನ ಶೇಕಡಾ 10ರಷ್ಟು ಫೈನ್ ತೆಗೆದುಕೊಳ್ಳುತ್ತೇವೆ. ಕಮರ್ಷಿಯಲ್‌ಗೆ ಶೇಕಡಾ 20ರಷ್ಟು ಫೈನ್ ಎಂದು ತೀರ್ಮಾನ ಮಾಡಿದ್ದೇವೆ. ಕಮರ್ಷಿಯಲ್‌ನಲ್ಲೂ ಶೇಕಡಾ 25ರವರೆಗೆ ಒಂದು ಸ್ಲ್ಯಾಬ್, ಅದರ ಮೇಲೆ ಡಬಲ್ ಹಾಕುವುದು ಎಂದು ಮಾಡಿದ್ದೇವೆ. ಪಬ್ಲಿಕ್ ಪರ್ಪಸ್‌ಗೆಂದು ಇರುವಂಥ ಓಪನ್ ಸ್ಪೇಸ್, ಪಾರ್ಕ್ ಮುಂತಾದ ಜಾಗಗಳಲ್ಲಿ ರೆಗ್ಯುಲರೈಸ್ ಮಾಡಲು ನಾವು ಅವಕಾಶ ಮಾಡಿಕೊಡುತ್ತಿಲ್ಲ. ಸ್ಥಳೀಯ ಸಂಸ್ಥೆಗಳವರು ಇಟ್ಟುಕೊಂಡಿರುವಂಥ ಬಿಲ್ಡಿಂಗ್ ನಾರ್ಮ್ಸ್, ಬೈ-ಲಾಗಳನ್ನು ಕಡ್ಡಾಯವಾಗಿ ಕಾರ್ಯರೂಪಕ್ಕೆ ತರಬೇಕು ಎನ್ನುವುದನ್ನೂ ಕೂಡ ನಾವು ಇಲ್ಲಿ ತಂದಿದ್ದೇವೆ. ಜೈಸೇಗಳಲ್ಲಿ ಇರತಕ್ಕಂಥಾದ್ದು, ಸರ್ಕಾರಿ ಜಾಗಗಳಲ್ಲಿ ಕೊಟ್ಟಿರತಕ್ಕಂಥಾ ಯಾವುದನ್ನೂ ರೆಗ್ಯುಲರೈಸ್ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಅವರು ಅರ್ಜಿ ಹಾಕಿಕೊಳ್ಳಲಿಕ್ಕೆ ಮೂರು ತಿಂಗಳ ಅವಕಾಶವನ್ನು ಕೊಟ್ಟಿದ್ದೇವೆ. ಮೂರು ತಿಂಗಳೊಳಗೆ ಅವರು ಅರ್ಜಿಯನ್ನು ಹಾಕಿಕೊಳ್ಳಬೇಕಾಗುತ್ತದೆ. ಮೂರು ತಿಂಗಳೊಳಗೆ ಅವರು ಅರ್ಜಿಯನ್ನು ಹಾಕಿ ಬಹುಶಃ ಮತ್ತೆ ಅವರೆಲ್ಲ ಇರಲಿಲ್ಲ details ಕಾನೂನಿನಂತೆ change of land use ಮತ್ತೊಂದು ಏನೇನು ಮಾಡಿಕೊಳ್ಳಬೇಕು ಅದನ್ನು ಕಾನೂನಿನಂತೆ ಮಾಡಿಕೊಂಡು ಅವರಿಗೆ ಮಾಡಲಿಕ್ಕೆ ಒಂದು ಅವಕಾಶವನ್ನು ಒದಗಿಸಿಕೊಟ್ಟಿದ್ದೇವೆ.

†ಶ್ರೀ ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಹಿಂದಿನ ಸರ್ಕಾರದಲ್ಲಿ ತುಂಬಾ ಚರ್ಚೆಯಾಗಿ ಇದನ್ನು ವಾಪಸ್ಸು ಗವರ್ನರ್‌ರವರು ಕಳುಹಿಸಿದ್ದು ನಿಜ. ಪ್ರಾಯಶಃ ಬೆಂಗಳೂರು ನಗರ ಒಂದರಲ್ಲೇ ಸುಮಾರು ಐದೂವರೆ ಆರು ಸಾವಿರ ಈ ರೀತಿಯಾಗಿರತಕ್ಕಂಥ ಕಡತಗಳು ನಗರಪಾಲಿಕೆಯಲ್ಲಿ ವಿವಿಧ ಹಂತಗಳಲ್ಲಿ ಕೊಳೆಯುತ್ತಿವೆ. ಇಬ್ಬೊಂದು ಉತ್ತಮವಾದಂಥ ತಿದ್ದುಪಡಿಯಾದರೂ ಕೂಡ, ಮುಂದೆಯೂ ಕೂಡ ಈ ರೀತಿಯಾಗಿ ಆಗತಕ್ಕಂಥದ್ದು ಇರುವುದರಿಂದ ಮೂರು ತಿಂಗಳ ಅವಧಿಯನ್ನು ನಿಗದಿಪಡಿಸಿದ್ದೇವೆಂದು ಮಾನ್ಯ ಸಚಿವರು ಏನು ಹೇಳಿದರು. ಅದು ಯಾವ ವರ್ಷದಿಂದ ಎಲ್ಲಿಯವರೆಗೆ ನಿಲ್ಲಿಸುತ್ತಾರೆ, ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಪಾರ್ಕ್‌ಗಳಾಗಲೀ, ಸಾರ್ವಜನಿಕ ಸ್ಥಳಗಳಾಗಲಿ, ಇನ್ನು ಬೇರೆ ಬೇರೆ ಉದ್ಯಾನವನಗಳಾಗಲಿ, ಆಟದ ಮೈದಾನಗಳಲ್ಲಿ ಕಟ್ಟಿರತಕ್ಕಂಥದ್ದು, ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸರ್ಕಾರಿ ಜಾಗದಲ್ಲಿ ಕಟ್ಟಿರತಕ್ಕಂಥದ್ದಕ್ಕೆ ಯಾವುದೇ ಕಾರಣಕ್ಕೂ ಕೂಡ ಇದರಲ್ಲಿ ದಾಕ್ಷಿಣ್ಯವನ್ನು ತೋರಿಸುವುದಿಲ್ಲ. ಅಂಥವನ್ನು ನಾವು ಮಾಡುವುದಿಲ್ಲ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಈ fine ಅನ್ನು ಏನು ಇವತ್ತು 10 ಪರ್ಸೆಂಟ್ 25 ಪರ್ಸೆಂಟ್ ಮಾಡಿದ್ದಾರೆ. ಈ ಕಮರ್ಶಿಯಲ್‌ಗೆ ಒಂದು residential ಗೆ ಒಂದು ರೇಟ್ ಮಾಡುವಾಗ ವಿಶೇಷವಾಗಿ ಬಹುಮಹಡಿಗಳನ್ನು ಕಟ್ಟಿರತಕ್ಕಂಥ ಅಪಾರ್ಟ್‌ಮೆಂಟ್‌ಗಳು, ಏಮ floor ಗೆ ಪರ್ಮಿಷನ್ ಇದ್ದರೆ ಅದನ್ನು ಆರೇಳು floor ಗಳಾಗಿ ಕಟ್ಟಿರುತ್ತಾರೆ. residential ಗೆ ಎಂದು ಜಾಗ ತೆಗೆದುಕೊಂಡು ಅದನ್ನು commercial complex ಮಾಡಿರುತ್ತಾರೆ. ಆದರೆ ಇವತ್ತಿಗೂ ಕೂಡ ಅವರು ಆ ಜಾಗವನ್ನು residential ಎಂದು

† ಈ ಚುಕ್ಕೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಶೀಲಿಸಿಲ್ಲವೆಂದು ಸೂಚಿಸುತ್ತದೆ

ತೋರಿಸಿಕೊಂಡಿರುತ್ತಾರೆ. ತಾವು ಏನು ಇಂಥ ನಿಯಮಗಳನ್ನು ಮಾಡುತ್ತೀರಿ ಆ ನಿಯಮಗಳನ್ನು ಮಾಡುವಾಗ ಕಟ್ಟುನಿಟ್ಟಾಗಿ ಜಾರಿಗೆ ತರತಕ್ಕಂಥದ್ದು ಈ ಹಣ ಏನು ಬರುತ್ತದೆ ಈ commercial complex ಗಳು high rise buildings, ಈ ಅಪಾರ್ಟ್‌ಮೆಂಟ್‌ಗಳೆಂದು ಏನು ಮಾಡಿದ್ದಾರೆ ಇದರ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರಬಯಸುವುದು ಏನೆಂದರೆ – ಈಗಾಗಲೇ ಮೈಸೂರು, ಬೆಂಗಳೂರು ಹುಬ್ಬಳ್ಳಿ–ಧಾರವಾಡ ಈ ರೀತಿ ನಗರಪಾಲಿಕೆ ವ್ಯಾಪ್ತಿಯಲ್ಲಿರತಕ್ಕಂಥ ಪ್ರದೇಶಗಳಲ್ಲಿ ಇನ್ನು ಮುಂದೆ ಇಂಥ ಯಾವುದೇ ಅನಧಿಕೃತ ಅಥವಾ ಲೈಸೆನ್ಸ್ ತೆಗೆದುಕೊಂಡು 2–3 ಅಂತಸ್ತುಗಳನ್ನು ಕಟ್ಟತಕ್ಕಂಥದ್ದು, 100ಕ್ಕೆ 90 ಭಾಗ deviation ಮಾಡತಕ್ಕಂಥದ್ದು ಇದಕ್ಕೆ ಒಂದು ಕಡಿವಾಣವನ್ನು ಹಾಕದೇ ಹೋದರೆ, ಹೇಗೋ ಒಂದಿಷ್ಟು fine ಅನ್ನು ನಮಗೆ ಹಾಕುತ್ತಾರೆ. ನಾವು ಹೇಗೋ ಕಟ್ಟಿಬಿಟ್ಟು ಒಂದಿಷ್ಟು fine ಕಟ್ಟಿಬಿಟ್ಟಿರೆ ಅದು regularize ಆಗುತ್ತದೆ ಎನ್ನುವ ಮನೋಭಾವನೆ ಸಾರ್ವಜನಿಕವಾಗಿ ಬರತಕ್ಕಂಥದ್ದು ಇರುವುದರಿಂದ, ದಯಮಾಡಿ ತಾವು ಇದನ್ನು ಮಾಡುವಾಗ ಇನ್ನು ಮುಂದೆ ಕಟ್ಟತಕ್ಕಂಥ ಯಾವುದೇ ಕಟ್ಟಡಗಳಿಗೂ ಕೂಡ ಲೈಸೆನ್ಸ್ ಏನು ಕೊಟ್ಟಿರುತ್ತಾರೆ. ಕಾನೂನಿನ ಚೌಕಟ್ಟಿನಲ್ಲಿ ಏನಿರುತ್ತದೆ ಅದನ್ನು ಬಿಟ್ಟು ಯಾವುದೇ ಕಾರಣಕ್ಕೂ ಕೂಡ ಕಟ್ಟಡಗಳನ್ನು ಕಟ್ಟದ ಹಾಗೆ ಒಂದು ತಹಬಂದಿಗೆ ತಂದರೆ, ಕನಿಷ್ಟ ಮುಖ್ಯ ರಸ್ತೆಗಳಿಗೆ, ಬೇರೆ ಬೇರೆ ಅತೀ ಜನನಿಬಿಡವಾದ ಪ್ರದೇಶಗಳಿಗೆ ಇದನ್ನು ಮಾಡದೇ ಹೋದರೆ high rise buildings ಗೆ ಮಾಡದೇ ಹೋದರೆ ಬೆಂಗಳೂರು ಆಗಬಹುದು ಅಥವಾ ಬೇರೆ ಬೇರೆ ನಗರಗಳಾಗಬಹುದು ಎಲ್ಲೋ ಒಂದು ಕಡೆ ಇನ್ನೂ ಕೂಡ ಹೆಚ್ಚಿನ ರೀತಿಯಲ್ಲಿ ನಮಗೆ ಈ ಕಟ್ಟಡಗಳಿಂದ ಆಗತಕ್ಕಂಥ ಅವ್ಯವಸ್ಥೆ ಜಾಸ್ತಿ ಆಗುವುದರಿಂದ, ಸನ್ಮಾನ್ಯ ಸಚಿವರು ತಂದಿರತಕ್ಕಂಥ ಈ ವಿಧೇಯಕವನ್ನು ಒಪ್ಪಿಕೊಳ್ಳುತ್ತಾ ಕೆಲವು ಮಾರ್ಪಾಡುಗಳನ್ನು ಮಾಡುವಾಗ ಕೆಲವು ಗುರುತರವಾದ ನಿಯಮಗಳನ್ನು ಇದರ ಜೊತೆಗೆ ಅಳವಡಿಸಬೇಕು. ಈಗಾಗಲೇ ಆಗಿರತಕ್ಕಂಥದ್ದಕ್ಕೆ ದಂಡವನ್ನು ವಿಧಿಸಿ ಆ ಕಡತಗಳು ಏನು 15–16 ವರ್ಷಗಳಿಂದ ಇವೆ ಅದಕ್ಕೆ ಒಂದಷ್ಟು fine ಗಳನ್ನು ಹಾಕಿ ಅದರಿಂದ ಬರತಕ್ಕಂಥ ಹಣವನ್ನು ಆಯಾ ನಗರಪಾಲಿಕೆಯಲ್ಲಿ ಬರತಕ್ಕಂಥ ಅಭಿವೃದ್ಧಿ ಕಾಮಗಾರಿಗಳಿಗೆ ವಿನಿಯೋಗ ಮಾಡತಕ್ಕಂಥದ್ದು ಮತ್ತು ಇನ್ನು ಮುಂದೆ ಯಾವುದೇ ಕಟ್ಟಡಗಳನ್ನು ಕಟ್ಟಿದರೆ ಒಂದು ಇಂಚು ಜಾಗವನ್ನೂ ಕೂಡ ನಿಯಮವನ್ನು ಉಲ್ಲಂಘನೆ ಮಾಡಿ ಮಾಡತಕ್ಕಂಥದ್ದಕ್ಕೆ ಕಾನೂನಿನ ಅಡಿಯಲ್ಲಿ ಯಾವುದೇ ಕಾರಣಕ್ಕೂ ಅವಕಾಶವನ್ನು ಕಲ್ಪಿಸಬಾರದೆನ್ನುವುದನ್ನು ಈ ತಿದ್ದುಪಡಿಯಲ್ಲಿ ಅಳವಡಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್:** ಮಾನ್ಯ ಅಧ್ಯಕ್ಷರೆ, ಅವರು ಕಾಲ ನಿಗದಿ ಬಗ್ಗೆ ಕೇಳಿದರು ಅದು ಈ ಬಿಲ್‌ನಲ್ಲಿಯೇ ಇದೆ. ಡಿಸೆಂಬರ್ 2003ರ ಒಳಗಡೆ ಯಾವ building ಅನ್ನು ಕಟ್ಟಿದ್ದಾರೆ ಅಂಥದ್ದಕ್ಕೆ ಮಾತ್ರ ಸೀಮಿತ, ಮುಂದಕ್ಕೆ ಬೇಕಾಬಿಟ್ಟಿ ಕಟ್ಟಲಿಕ್ಕೆ ಅವಕಾಶ ಬಿಟ್ಟರೆ ಇದಕ್ಕೆ ಕೊನೆಯೇ ಇರುವುದಿಲ್ಲ ಎನ್ನುವ ದೃಷ್ಟಿಯಿಂದ ಅವರು ಮೂರು ತಿಂಗಳೊಳಗೆ ಅರ್ಜಿಯನ್ನು ಹಾಕಿಕೊಳ್ಳುತ್ತಾರೆ. ಮಿಕ್ಕಿದ್ದು bye-laws ನಲ್ಲಿ ತಾವು ಹೇಳಿದ್ದೆಲ್ಲವನ್ನೂ ಕೂಡ ಜೊತೆಗೆ ಕಾಲ ನಿಗದಿ ಕೂಡ ನಾವು ಮಾಡಿದ್ದೇವೆ. ಆದರೆ bye-law ಅನ್ನು ಬಿಟ್ಟು ಇಲ್ಲಿ ಮಾಡಲಿಕ್ಕೆ ಯಾವುದೇ ತರಹದ ಅವಕಾಶವನ್ನು ಆ ಸ್ಥಳೀಯ ಸಂಸ್ಥೆಗಳಿಗೆ ನಾವು ಕೊಟ್ಟಿಲ್ಲ. ಆದ್ದರಿಂದ ಇದು ಬಹಳ ಚರಿತ್ರಾರ್ಹವಾದುದು, ಬಹುಶಃ ಎಲ್ಲಾ ಸಂಘಸಂಸ್ಥೆಗಳಿಗೆ ಇಡೀ ರಾಜ್ಯದಲ್ಲಿ ಎಲ್ಲಾ ನಗರಗಳಿಗೂ ಲೆಕ್ಕ ಹಾಕಿಕೊಂಡರೆ ಒಂದು

ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಕಾರ್ಪೊರೇಷನ್‌ಗಳಿಗೆ, ಸಿ.ಎಂ.ಸಿ. ಗಳಿಗೆ ಹಣ ಬರಬಹುದೆಂದು ನನಗನ್ನಿಸುತ್ತದೆ. ಇದನ್ನು ಕಾನೂನು ಬದ್ಧವಾಗಿಯೇ ಮಾಡಿದರೆ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಸ್ಥಳೀಯ ಸಂಸ್ಥೆಗಳಿಗೆ ಬರುತ್ತದೆ ಎನ್ನುವುದು ನನ್ನ ಒಂದು ನಂಬಿಕೆ. ಈ ಮಧ್ಯದಲ್ಲಿ ಅವರ್ಯಾರೂ regularize ಮಾಡಿಕೊಳ್ಳಲಿಲ್ಲವೆನ್ನುವುದಾದರೆ ನಾವು ಇಲ್ಲಿ ಅವರಿಗೆ trader's licence, electricity ಮತ್ತು water supply ಕೂಡ connection ಕೊಡುವುದಕ್ಕೆ ಆಗುವುದಿಲ್ಲ ಎನ್ನುವುದನ್ನೂ ಕೂಡ conditions ಹಾಕಿದ್ದೇವೆ. ತಾವು ಈ ವಿಧೇಯಕವನ್ನು ತಂದಾಗ ಅಷ್ಟು ಇರಲಿಲ್ಲ. ನಾವು ಇಲ್ಲಿ ಏಕೆಂದರೆ law binding citizens ಮಾಡಬೇಕೆನ್ನುವುದು ನಮ್ಮ ಆಸೆ. ಆ ಹಿನ್ನೆಲೆಯಲ್ಲಿ ಕೂಡ ನಾವು ಇದನ್ನು ತಂದು ಏನೇನು ರಾಜ್ಯಪಾಲರು ಸೂಚನೆ ಮಾಡಿದ್ದರೋ ಅದೆಲ್ಲವನ್ನೂ ಕೂಡ ನಾವು ಈ ವಿಧೇಯಕದಲ್ಲಿ ತಂದಿದ್ದೇವೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4ರವರೆಗೆ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:– "ಖಂಡ 2 ರಿಂದ 4ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:–

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಅಧ್ಯಕ್ಷರು:** ಪ್ರಸ್ತಾವ ಏನೆಂದರೆ:

"ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2004**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):** ಮಾನ್ಯ ಅಧ್ಯಕ್ಷರೆ,

"ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):** ಮಾನ್ಯ ಅಧ್ಯಕ್ಷರೆ, ಇದು ನಮ್ಮ Town and Country Planning Act ನಲ್ಲಿ O.D.P., C.D.P. ಎಂದು ಇತ್ತು. ಅದೆರಡನ್ನೂ ಕೂಡ merge ಮಾಡಿ ಒಂದು Master Plan ಎಂದು ಮಾಡಿದ್ದೇವೆ. ಏಕೆಂದರೆ ಅನೇಕ ಈ heritage building ಗಳನ್ನು ಮತ್ತೆ ಬೇರೆ ಇರುವಂಥ ಅನೇಕ building ಗಳನ್ನು ಕಾಪಾಡಬೇಕೆನ್ನುವ ದೃಷ್ಟಿಯಿಂದ Planning authority ಗೆ jurisdiction ಅನ್ನು ಕೊಡಬೇಕೆನ್ನುವಂಥದ್ದನ್ನೆಲ್ಲಾ ಸೇರಿಸಿ, ಜೊತೆಗೆ 74th Amendment ನಲ್ಲಿ ಈ delegation of powers to the planning authority ಅನೇಕ licence ಮತ್ತೊಂದು ಕೊಡಲಿಕ್ಕೆ ಸ್ಥಳೀಯ ಸಂಸ್ಥೆಗಳಿಗೆ ಅವಕಾಶವನ್ನು ಮಾಡಿಕೊಡಬೇಕು ಎನ್ನುವುದನ್ನೂ ಕೂಡ ನಾವು ಇಲ್ಲಿ ತಂದಿದ್ದೇವೆ, ಮತ್ತು change of land use ಕೂಡ ಮಾಡಲಿಕ್ಕೆ ಸಧ್ಯದಲ್ಲಿಯೇ ಅವರಿಗೂ ಕೂಡ ಏನು ಅತಂಕ ಆಗುತ್ತಿತ್ತು ಏನು ತೊಂದರೆ ಆಗುತ್ತಿತ್ತು ಅದನ್ನೂ ಕೂಡ ಟೈಮ್‌ನ್ನು ಲಿಮಿಟ್ ಮಾಡಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಅಲ್ಲೂ ಕೂಡ ಹಣವನ್ನು ಕಟ್ಟಿ ನೇರವಾಗಿ ಮಾಡಲಿಕ್ಕೆ ಇಲ್ಲಿ ಒಂದು ಅವಕಾಶವನ್ನು ತಂದಿದ್ದೇವೆ.

**ಅಧ್ಯಕ್ಷರು:** ಪ್ರಸ್ತಾವ ಏನೆಂದರೆ;

"ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 14ರವರೆಗೆ**

**ಅಧ್ಯಕ್ಷರು:** ಪ್ರಸ್ತಾವ ಏನೆಂದರೆ:- "ಖಂಡ 2 ರಿಂದ 24ರವರೆಗೆ, ಎರಡೂ ಸೇರಿಸಂತೆ, ಈ ವಿಧೇಯಕದ ಅಂಗವಾಗಿರುತ್ತದೆ."